ಮಂಗಳೂರು ವಿಶ್ವವಿದ್ಯಾನಿಲಯವು ಸೆಪ್ಟಂಬರ್ 10, 1980ರಂದು ಸ್ಥಾಪನೆಗೊಂಡಿದ್ದು ಉನ್ನತ ಶಿಕ್ಷಣ ಹಾಗೂ ಸಂಶೋಧನೆಯ ಪ್ರಗತಿ ಪಥದಲ್ಲಿದೆ. ರಾಷ್ಟ್ರೀಯ ಮೌಲ್ಯಮಾಪನ ಮತ್ತು ಶ್ರೇಯಾಂಕ ಮಂಡಲಿ (ನ್ಯಾಕ್) ಯಿಂದ 'ಎ' ಗ್ರೇಡ್ ಪಡೆದಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ವಿವಿಧ ಧ್ಯೇಯೋದೇಶಗಳ 22 ಅಧ್ಯಯನ ಪೀಠ/ಕೇಂದ್ರಗಳಿವೆ.

# ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ

ಬ್ರಹ್ಮಶ್ರೀ ನಾರಾಯಣಗುರುಗಳು ಹತ್ತೊಂಬತ್ತನೆಯ ಶತಮಾನದ ಕೇರಳದ ಮಹಾನ್ ಸಂತ, ಹಾಗೂ ಸಮಾಜ ಸುಧಾರಕರು ಅದ್ವೈತ ಪ್ರತಿಪಾದನೆ, 'ಮಾನವರೆಲ್ಲ ಒಂದೇ ಜಾತಿ, ಒಂದೇ ಮತ, ಎಲ್ಲರಿಗೂ ದೇವರೊಬ್ಬನೇ' ಎನ್ನುವ ಸರಳ ಸಂದೇಶಗಳೊಂದಿಗೆ ಕೇರಳ, ತಮಿಳುನಾಡು ಮಾತ್ರವಲ್ಲದೇ ಕರ್ನಾಟಕ ಕರಾವಳಿ ಜಿಲ್ಲೆಗಳನ್ನೂ ಪ್ರಭಾವಿಸಿ ಸಾಮಾಜಿಕ ಪರಿವರ್ತನೆ ಸಾಧಿಸಿದವರು. ದಾರ್ಶನಿಕತೆ, ಪ್ರಖರ ಚಿಂತನೆ, ಪಾಂಡಿತ್ಯದ ಅವರ ಸರಳ ಉದ್ಬೋಧಕ ಕೃತಿಗಳು ಸಮಾಜ ಸುಧಾರಣಾ ಕಾರ್ಯಗಳು ಹಿಂದುಳಿದ ಸಮಾಜದ ಆತ್ಮಸ್ಥೈರ್ಯ ಮತ್ತು ಸಂಘರ್ಷರಹಿತ ಸಮಾಜ ನಿರ್ಮಾಣಕ್ಕಾಗಿ ಸಮಕಾಲೀನವಾಗಿಯೂ ಅತ್ಯಂತ ಪ್ರಸ್ತುತವಾಗಿವೆ. ಇಂತಹ ಮಹೋನ್ನತದ ವ್ಯಕ್ತಿತ್ವದ ಬ್ರಹ್ಮಶ್ರೀ ನಾರಾಯಣಗುರುಗಳ ಕೃತಿಗಳು, ಕಾರ್ಯ ವಿಧಾನ, ಸಾಮಾಜಿಕ ಸುಧಾರಣಾ ತತ್ವಗಳನ್ನು ಇಂದಿನ ಮತ್ತು ಮುಂದಿನ ತಲೆಮಾರಿಗೆ ವಿಸ್ತರಿಸುವ ಸದುದ್ಧೇಶದಿಂದ **ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠ** ಸ್ಥಾಪನೆಗೊಂಡಿದೆ.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ದಿನಾಂಕ 19.01.2017ರಂದು ಉದ್ಘಾಟಿಸಿರುತ್ತಾರೆ ಕರ್ನಾಟಕ ಸರ್ಕಾರವು ಈ ಪೀಠಕ್ಕೆ ಪ್ರಾರಂಭಿಕವಾಗಿ ರೂ. ಒಂದು ಕೋಟಿ ಮೂಲ ನಿಧಿಯನ್ನು ಒದಗಿಸಿರುತ್ತದೆ. ಪೀಠದ ನಿರ್ದೇಶಕರಾಗಿ ಲೇಖಕ, ಸಂಶೋಧಕ ಶ್ರೀ ಮುದ್ದು ಮೂಡುಬೆಳ್ಳೆ ನಿಯುಕ್ತಿಗೊಂಡು ಸಲಹಾ ಸಮಿತಿ ಶಿಫಾರಸು ಮೇರೆಗೆ ಪೀಠದ ಕಾರ್ಯ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದಾರೆ.

**ಪೀಠದ ಧ್ಯೇಯ, ಉದ್ದೇಶಗಳು:**

1) ಶ್ರೀ ನಾರಾಯಣಗುರುಗಳ ಕುರಿತು ಅಧ್ಯಯನಕ್ಕೆ ಅನುಕೂಲವಾಗುವಂತೆ, ಈವರೆಗೆ ವಿವಿಧ ಭಾಷೆಗಳಲ್ಲಿ ಪ್ರಕಟವಾಗಿರುವ ಅಧ್ಯಯನ ಕೃತಿಗಳನ್ನು ದಾನ ಮತ್ತು ಖರೀದಿ ಮೂಲಕ ಸಂಗ್ರಹಿಸಿ ಸುಸಜ್ಜಿತ ಗ್ರಂಥಾಲಯ ಸ್ಥಾಪನೆ (ಈ ಕಾರ್ಯ ಈಗಾಗಲೇ ಆರಂಭವಾಗಿದೆ)
2) ಗುರುಗಳ ಕುರಿತಾದ ಆಡಿಯೋ,ವೀಡಿಯೋ ಧ್ವನಿಸುರುಳಿಗಳು, ಸಾಕ್ಷ್ಯಚಿತ್ರಗಳು, ಚಲನಚಿತ್ರ ಪ್ರತಿಗಳನ್ನು ಸಂಗ್ರಹಿಸಿ ಸುವ್ಯವಸ್ಥಿತ ಪತ್ರಾಗಾರ (ಆರ್ಕೈವ್) ನಿರ್ಮಿಸುವುದು.
3) ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಾಗೂ ಸಂಯೋಜಿತ ವಿದ್ಯಾಲಯಗಳಲ್ಲಿ ವಿವಿಧ ನಿಕಾಯಗಳ ಪ್ರಾಧ್ಯಾಪಕರ ನೆರವು ಪಡೆದು ಶ್ರೀ ನಾರಾಯಣಗುರುಗಳ ಬಹುಮುಖೀ ಧಾರ್ಮಿಕ, ಸಾಮಾಜಿಕ ಚಳುವಳಿಗಳು ಮತ್ತು ಅದರಿಂದುಂಟಾದ ಸಾಮಾಜಿಕ ಪ್ರಗತಿ ಕುರಿತಾಗಿ ತಜ್ಞರನ್ನು ಆಹ್ವಾನಿಸಿ ಸಂವಾದ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.
4) ಬ್ರಹ್ಮಶ್ರೀ ನಾರಾಯಣಗುರುಗಳ ಕುರಿತಾಗಿ ಪಿ.ಹೆಚ್.ಡಿ. ಅಧ್ಯಯನ ಮತ್ತಿತರ ಸಾಧನೆ ಮಾಡಿರುವವರನ್ನು ಗುರುತಿಸಿ ಗೌರವಿಸುವುದು.

5) ಶ್ರೀ ನಾರಾಯಣಗುರುಗಳ ಕುರಿತಾಗಿ ದೀರ್ಘಕಾಲದಿಂದ ಸಮಾಜಮುಖಿಯಾಗಿ ಅಧ್ಯಯನ ಮಾಡಿದವರು, ಗುರುಗಳ ತತ್ವ ಪ್ರಚಾರಕರು, ಗುರುಸಂದೇಶಗಳ ನೆರಳಲ್ಲಿ ಸಮಾಜಕಾರ್ಯ ಮಾಡುತ್ತಿರುವವರನ್ನು ಗುರುತಿಸಿ ಅಧ್ಯಯನ ಪೀಠಕ್ಕೆ ಸಹಕಾರ ಕೋರುವುದು.
6) ಮಾನವ ಸೋದರತೆ ಮತ್ತು ಅಶಕ್ತರ, ಶೋಷಿತರ ಉದ್ಧಾರಕ್ಕಾಗಿ ದುಡಿದ ಸಮಾಂತರ ಸಮಾಜ ಸುಧಾರಕರು ಉದಾ: ಗಾಂಧಿ,ಬುದ್ಧ,ಬಸವಣ್ಣ,ಕನಕದಾಸ,ಕಬೀರ,ಅಂಬೇಡ್ಕರ್ ಮುಂತಾದವರ ಹಾಗೂ ಶ್ರೀ ನಾರಾಯಣಗುರುಗಳ ಕುರಿತ ತೌಲನಿಕ ಅಧ್ಯಯನ, ವಿಚಾರವಿಮರ್ಶೆ, ಪ್ರಸಾರ ಕುರಿತು ಯೋಜನೆ ಹಮ್ಮಿಕೊಳ್ಳುವುದು.
7) ನಾರಾಯಣಗುರುಗಳು ಸ್ಥಾಪಿಸಿದ ಸಂಘಟನಾ ಸಂಸ್ಥೆ, ಧಾರ್ಮಿಕ – ಶೈಕ್ಷಣಿಕ ಕೇಂದ್ರಗಳು ಮತ್ತಿತರ ಕೇರಳದ ಸ್ಥಳಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹ, ಅಧ್ಯಯನ, ದಾಖಲೀಕರಣ ನಡೆಸುವುದು.
8) ನಾರಾಯಣಗುರುಗಳ ಹಲವು ವಿಧದ ಸುಧಾರಣಾ ಚಳುವಳಿ, ತತ್ವ ಸಂದೇಶ, ಸಾಧನೆಗಳ ಕುರಿತು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಿ ಅಲ್ಲಿ ಮಂಡಿಸುವ ಪ್ರಬಂಧಗಳನ್ನು ಭಾಷಾವಾರಾಗಿ ಪ್ರಕಟಿಸುವ ಯೋಜನೆ ಕೈಗೆತ್ತಿಕೊಳ್ಳುವುದು.
9) ಪೀಠದ ಕಛೇರಿಯು ಈಗ ತಾತ್ಕಾಲಿಕವಾಗಿ ವಿಶ್ವವಿದ್ಯಾನಿಲಯದ ಆಡಳಿತ ಸೌಧದಲ್ಲಿದೆ. ಶ್ರೀ ನಾರಾಯಣಗುರು ಪೀಠಕ್ಕೆ ಪ್ರತ್ಯೇಕ ಕಟ್ಟಡದ ನಿರ್ಮಾಣದ ಅವಶ್ಯಕತೆ ಇದೆ. ಇದಕ್ಕಾಗಿ ಪ್ರಯತ್ನಿಸಿ ದಾನಿಗಳನ್ನು ವಿನಂತಿಸುವುದು. ಮುಂದೆ ನಿರ್ಮಾಣಗೊಳ್ಳುವ ಕಟ್ಟಡದಲ್ಲಿ ಅಧ್ಯಯನ ಕೊಠಡಿ, ಸುಸಜ್ಜಿತ ಥೀಮ್ ಪಾರ್ಕ್, ಆಡಿಯೋ–ವೀಡಿಯೋ, ಧ್ವನಿ ಬೆಳಕು ಮುಂತಾದ ವ್ಯವಸ್ಥೆಗಳಿಗೆ ಪ್ರಯತ್ನಿಸುವುದು.

ಹಾಗೂ ಅಧ್ಯಯನ ಪೀಠದ ನಿಯಮಾವಳಿ ಚೌಕಟ್ಟಿನಲ್ಲಿ ಬರುವ ಇತರ ವಿಷಯಗಳು.

## ಪೀಠದ ಚಟುವಟಿಕೆಗಳು:

★ ಅಧ್ಯಯನ ಪೀಠದ ಉದ್ಘಾಟನೆ ದಿನಾಂಕ 19.01.2017ರಂದು ಕರ್ನಾಟಕ ಸರಕಾರದ ಮಾನ್ಯ ಮುಖ್ಯಮಂತ್ರಿ ಶ್ರೀ. ಸಿದ್ಧರಾಮಯ್ಯನವರಿಂದ ಜರಗಿತು. ರಾಜ್ಯ ಉನ್ನತ ಶಿಕ್ಷಣ ಸಚಿವ ಶ್ರೀ ಬಸವರಾಜ ರಾಯರೆಡ್ಡಿ, ಸಚಿವ ಶ್ರೀ ರಮಾನಾಥ ರೈ, ಮಾಜಿ ಸಚಿವ ವಿನಯಕುಮಾರ ಸೊರಕೆ, ವಿಶ್ರಾಂತ ಕುಲಪತಿ ಪ್ರೊ. ಬಿ. ಎ. ವಿವೇಕ ರೈ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು. ಕುಲಪತಿ ಪ್ರೊ. ಕೆ. ಬೈರಪ್ಪ ಅಧ್ಯಕ್ಷತೆ ವಹಿಸಿದ್ದರು.

★ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ **'ಗುರುವಿನ ಅರಿವು'** ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಉದ್ಘಾಟನೆ 06.03.2017. ಮಂಗಳಗಂಗೋತ್ರಿಯ ಎಂ.ಬಿ.ಎ. ಸಭಾಂಗಣದಲ್ಲಿ ನೆರವೇರಿತು. ರಾಜ್ಯಸಭಾ ಸದಸ್ಯ ಬಿ.ಕೆ. ಹರಿಪ್ರಸಾದ್ ಆಗಮಿಸಿ ದಿಕ್ಸೂಚಿ ಭಾಷಣ ಮಾಡಿದರು. ಕೇರಳ ವಿಶ್ವವಿದ್ಯಾನಿಲಯದ ಡಾ. ಎನ್. ಸುರೇಶ್ ಅವರು *19$^{th}$ Century Kerala and the Advent of Narayana Guru* ಎಂಬ ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದರು.

★ ಮಾಲಿಕೆಯ ಎರಡು ಮತ್ತು ಮೂರನೇ ಉಪನ್ಯಾಸಗಳು ಮಂಗಳೂರಿನ ಉರ್ವಸ್ಟೋರ್ ಮತ್ತು ಬಲ್ಮಠದಲ್ಲಿ ಜರಗಿದವು. ದಿನಾಂಕ 13.05.2017 ಶನಿವಾರ ಮಂಗಳೂರು ಉರ್ವಸ್ಟೋರ್‌ನ ತುಳುಭವನ ಸಭಾಂಗಣದಲ್ಲಿ ಜರಗಿದ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಡಾ. ಮಧುಮಾಲಾ (ಸಹಪ್ರಾಧ್ಯಾಪಕರು, ಆಳ್ವಾಸ್ ಕಾಲೇಜು, ಮೂಡುಬಿದರೆ) ಇವರು **'ಮಹಿಳೆಯರ ಪ್ರಾತಿನಿಧ್ಯ–ಗುರು ಚಿಂತನೆಗಳ ನೆರಳಲ್ಲಿ'** ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಮಂಗಳೂರು ತಾಲೂಕು ಮಹಿಳಾಮಂಡಲಗಳ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಚಂಚಲಾ ತೇಜೋಮಯ ಅಧ್ಯಕ್ಷತೆ ವಹಿಸಿದ್ದರು.

★ ದಿನಾಂಕ 17.06.2017 ಶನಿವಾರ ಬಲ್ಮಠದ ಸಹೋದಯ ಸಭಾಂಗಣದಲ್ಲಿ **'ಗುರುವಿನ ಅರಿವು'** ಮಾಲಿಕೆಯ 3ನೆಯ ಕಾರ್ಯಕ್ರಮವಾಗಿ ಶ್ರೀ ಪೇರೂರು ಜಾರು ಅವರ ತುಳುಭಾಷೆಯ ಮಹಾಕಾವ್ಯ **'ಗುರುಕುಲೆ ಗುರು ನಾರಾಯಣ'** ಇದರ ಹಿನ್ನಲೆಯಲ್ಲಿ ಶ್ರೀ ಮಲಾರ್ ಜಯರಾಮ ರೈ ಅವರು ಉಪನ್ಯಾಸವಿತ್ತರು. ಕೆ.ಎಸ್.ಡಿ ನಿವೃತ್ತ ಧರ್ಮಾಧ್ಯಕ್ಷರಾದ ರೈ.ರೆ ಡಾ. ಸಿ.ಎಲ್. ಫುರ್ಟಾಡೋ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬೆನೆಟ್ ಜಿ. ಅಮ್ಮನ್ನ ಅವರ ನಿರ್ವಹಣೆಯಲ್ಲಿ ಜರಗಿದ ನಾರಾಯಣ ಗುರುಗಳ ಕುರಿತಾದ ಸಂವಾದ ಕಾರ್ಯಕ್ರಮದಲ್ಲಿ ಸರ್ವಶ್ರೀ ಪ್ರವೀಣ್ ಶೆಟ್ಟಿ, ಎನ್.ಪಿ. ಶೆಟ್ಟಿ, ರಮಾನಾಥ ಕೋಟೆಕಾರ್, ಬಿ.ಎಂ ರೋಹಿಣಿ ಹಾಗೂ ಲೇಖಕ ಪೇರೂರು ಜಾರು ಮುಂತಾದವರು ಪಾಲ್ಗೊಂಡಿದ್ದರು.

ಅಧ್ಯಯನ ಪೀಠದ 2017–18ನೇ ಸಾಲಿನ ದ್ವಿತೀಯ ಹಂತದ ಉಪನ್ಯಾಸ ಮಾಲಿಕೆಯ ಉದ್ಘಾಟನೆ ದಿನಾಂಕ 25.07.2017ರಂದು ಬಂಟ್ವಾಳ ಸಿದ್ಧಕಟ್ಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರಗಿತು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿನಿರ್ದೇಶಕ ಡಾ. ಉದಯಶಂಕರ್ ಅವರು ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸಿ ಮಾತನಾಡುತ್ತಾ, "ನಾರಾಯಣಗುರುಗಳಂತಹ ಮಹಾನ್ ವ್ಯಕ್ತಿತ್ವದ ಸಮಾಜಮುಖಿ ಸಾಧನೆಗಳ ಪರಿಚಯ ಇನ್ನಷ್ಟು ಹೆಚ್ಚು ಹೆಚ್ಚಾಗಿ ಆಗಬೇಕಾಗಿದೆ. ವಿದ್ಯಾರ್ಥಿಗಳು, ಯುವಜನತೆ ಅದರ ಪ್ರಯೋಜನ ಪಡೆದುಕೊಳ್ಳಬೇಕು" ಎಂದು ಹಾರೈಸಿದರು. ಕಾಲೇಜಿನ ಪ್ರಾಂಶುಪಾಲರಾದ ಸಂಪನ್ಮೂಲ ವ್ಯಕ್ತಿ ಡಾ. ಎಸ್. ಎನ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಯನ ಪೀಠದ ನಿರ್ದೇಶಕ ಮುದ್ದು ಮೂಡುಬೆಳ್ಳೆ ಪ್ರಾಸ್ತವಿಕವಾಗಿ ಮಾತನಾಡಿದರು. ನಿವೃತ್ತ ಪ್ರಾಧ್ಯಾಪಕ ಶ್ರೀ ಬೈಕಾಡಿ ಜನಾರ್ಧನ ಆಚಾರ್ ನಾರಾಯಣಗುರುಗಳ ಜೀವನ ಸಾಧನೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಮಾಲಿಕೆಯ ಇತರ ಉಪನ್ಯಾಸಗಳನ್ನು ಸರ್ವಶ್ರೀ ಬಾಬು ಶಿವಪೂಜಾರಿ, ಉದಯಕುಮಾರ ಹಬ್ಬು, ಟಿ. ಎ. ಎನ್ ಖಂಡಿಗೆ, ಸಚಿತಾ ನಂದಗೋಪಾಲ್, ನೆಕ್ಕಿತಪುಣಿ ಗೋಪಾಲಕೃಷ್ಣ, ಮೋಹನ ಉಪ್ಪಳ ಇವರು ಉಡುಪಿ ಹಾಗೂ ದ.ಕ. ಜಿಲ್ಲೆಗಳ ವಿವಿಧ ಕಾಲೇಜುಗಳಲ್ಲಿ ನಡೆಸಿಕೊಟ್ಟರು.

★ 06.09.2017ರಂದು ವಿಶ್ವವಿದ್ಯಾನಿಲಯದ ಸೆನೆಟ್ ಹಾಲ್‌ನಲ್ಲಿ ನಾರಾಯಣಗುರು ಜಯಂತಿ ನಡೆಯಿತು. ಪ್ರೊ. ಬಿ. ಸುರೇಂದ್ರರಾವ್ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಎಂ.ಪಿ ಕೋಟ್ಯಾನ್, ರೋಹಿಣಿ ಮತ್ತಿತರರು ಪಾಲ್ಗೊಂಡಿದ್ದರು.